# ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52.

## Form-II

**(ತಿದ್ದುಪಡಿ ನಿಯಮ-9 (i ರಿಂದ vi))**

**ಚುನಾವಣಾ ನೋಟೀಸ್**

**Karnataka Medical Registration Act 1961 ಮತ್ತು ನಿಯಮ 1963 ಹಾಗೂ ತಿದ್ದುಪಡಿ ನಿಯಮ 2019 ರಡಿಯ ಅವಕಾಶಗಳಂತೆ ಕರ್ನಾಟಕ ವೈದ್ಯಕೀಯ ಪರಿಷತ್, ಬೆಂಗಳೂರು ಇದರ ಕಂದಾಯ ವಿಭಾಗವಾರು ಚುನಾವಣಾ ವೇಳಾಪಟ್ಟಿಯ ಪ್ರಕಟಣೆ.**

---

**ಚುನಾವಣಾ ನೋಟೀಸ್**

ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52 ಇದರ **ಚುನಾವಣೆಯನ್ನು ಪರಿಷತ್ತಿನ ಚುನಾವಣಾ ದಿನಾಂಕದಿಂದ ಮುಂದಿನ 05 (ಐದು) ವರ್ಷಗಳ** (Karnataka Medical Registration Act 1961 ಕಲಂ 5 ರಂತೆ) ಆಡಳಿತಾವಧಿಗೆ ರಾಜ್ಯದ ಕಂದಾಯ **ವಿಭಾಗಗಳಾದ ಬೆಂಗಳೂರು, ಮೈಸೂರು, ಬೆಳಗಾಂ, ಗುಲ್ಬರ್ಗ,** (Karnataka Medical Registration Act 1961 ರ ತಿದ್ದುಪಡಿ ಕಾಯ್ದೆ 2017 ಕಲಂ 3(2)(ಎ) ಮತ್ತು (ಬಿ) ರಂತೆ) ಈ 4 ಕಂದಾಯ ವಿಭಾಗವಾರು ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ಪ್ರತಿ ವಿಭಾಗದಿಂದ **ಮೆಡಿಕಲ್ ಪ್ರಾಕ್ಟೀಷನರ್ಸ್ ಕ್ಷೇತ್ರದಿಂದ-ಇಬ್ಬರು,** ಹಾಗೂ **ಟೀಚರ್ಸ್ ಕ್ಷೇತ್ರದಿಂದ-ಒಬ್ಬರು** ಹೀಗೆ 4 ಕಂದಾಯ ವಿಭಾಗಗಳಿಂದ ಒಟ್ಟು **8 ಜನ ಮೆಡಿಕಲ್ ಪ್ರಾಕ್ಟೀಷನರ್ಸ್** ಹಾಗೂ **4 ಟೀಚರ್ಸ್‌ರವರನ್ನು ಕೆ.ಎಂ.ಸಿ ಬೆಂಗಳೂರು ಇದರ ಆಡಳಿತ ಮಂಡಳಿ ಸದಸ್ಯರನ್ನಾಗಿ ಆಯ್ಕೆ ಮಾಡಲು** ಮತದಾನದ ಮೂಲಕ ಮತದಾನದ ಹಕ್ಕನ್ನು ಹೊಂದಿರುವ ಅರ್ಹ ಸದಸ್ಯರು ಒಟ್ಟು 12 ಜನರನ್ನು ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ಚುನಾಯಿಸಬೇಕಾಗಿರುತ್ತದೆ, ಆದ್ದರಿಂದ ರಿಟರ್ನಿಂಗ್ ಅಧಿಕಾರಿಯಾದ ನಾನು ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿ ಈ ಚುನಾವಣಾ ನೋಟೀಸ್‌ನ್ನು ನೀಡಲಾಗಿದೆ.

**-:ಚುನಾವಣಾ ವೇಳಾಪಟ್ಟಿ:-**

| | | |
|---|---|---|
| 1. | ಚುನಾವಣೆಗೆ ಸ್ಪರ್ಧಿಸಲು ಇಚ್ಚಿಸುವಂತಹ ಅರ್ಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ. | ದಿನಾಂಕ:01-01-2020 ಬುಧವಾರದಿಂದ. ಬೆಳಿಗ್ಗೆ 10.00 ರಿಂದ ಸಂಜೆ 5.00 ಘಂಟೆಯ ವರೆಗೆ, ನಾಮಪತ್ರವನ್ನು ರಿಟರ್ನಿಂಗ್ ಅಧಿಕಾರಿ/ ಚುನಾವಣಾಧಿಕಾರಿ ಇಲ್ಲವೇ ಅಧಿಕಾರ ಪತ್ರ ಪಡೆದ ಅಧಿಕಾರಿ.<br>ಬೆಂಗಳೂರು ರೆವೆನ್ಯೂ ವಿಭಾಗ-ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52. |

| | | |
|---|---|---|
| | | ಮೈಸೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು.<br>ಬೆಳಗಾಂ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾಂ<br>ಗುಲ್ಬರ್ಗ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಗುಲ್ಬರ್ಗ,<br>[ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಚುನಾವಣಾಧಿಕಾರಿ ಇಲ್ಲವೇ ಅಧಿಕಾರ ಪತ್ರ ಪಡೆದ ಅಧಿಕಾರಿ] |
| 2. | ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ (Karnataka Medical Registration Rules 1963 ತಿದ್ದುಪಡಿ ನಿಯಮ 2019 ನಿಯಮ 9(v) ರಂತೆ) | ದಿನಾಂಕ:10-01-2020 ಶುಕ್ರವಾರದಿಂದ ಬೆಳಿಗ್ಗೆ 10.00 ರಿಂದ ಸಂಜೆ 5.00 ಘಂಟೆಯ ವರೆಗೆ, ನಾಮಪತ್ರವನ್ನು ರಿಟರ್ನಿಂಗ್ ಅಧಿಕಾರಿ/ ಚುನಾವಣಾಧಿಕಾರಿ ಇಲ್ಲವೇ ಅಧಿಕಾರ ಪತ್ರ ಪಡೆದ ಅಧಿಕಾರಿ.<br>ಬೆಂಗಳೂರು ರೆವೆನ್ಯೂ ವಿಭಾಗ-ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52.<br>ಮೈಸೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು.<br>ಬೆಳಗಾಂ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾಂ<br>ಗುಲ್ಬರ್ಗ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಗುಲ್ಬರ್ಗ,<br>[ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಚುನಾವಣಾಧಿಕಾರಿ ಇಲ್ಲವೇ ಅಧಿಕಾರ ಪತ್ರ ಪಡೆದ ಅಧಿಕಾರಿ] |
| 3. | ರಿಟರ್ನಿಂಗ್/ಚುನಾವಣಾಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (Karnataka Medical Registration Rules 1963, ನಿಯಮ 11ರಂತೆ) | ದಿನಾಂಕ:13-01-2020 ನಾಮಪತ್ರಗಳ ಪರಿಶೀಲನೆ ಬೆಳಿಗ್ಗೆ 11.00 ಗಂಟೆಯಿಂದ.<br>ಬೆಂಗಳೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿಗಳು ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52.<br>ಮೈಸೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು.<br>ಬೆಳಗಾಂ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾಂ<br>ಗುಲ್ಬರ್ಗ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಗುಲ್ಬರ್ಗ, |
| 4. | ರಿಟರ್ನಿಂಗ್/ಚುನಾವಣಾಧಿಕಾರಿಯಿಂದ ನಾಮ ಪತ್ರ ಪರಿಶೀಲನೆ ನಂತರ ಕ್ರಮಬದ್ಧ ನಾಮಪತ್ರಗಳನುಸಾರ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ. | ದಿನಾಂಕ:13-01-2020 ಸೋಮವಾರ ನಾಮಪತ್ರಗಳ ಪರಿಶೀಲನೆ ನಂತರ ರಿಟರ್ನಿಂಗ್ ಅಧಿಕಾರಿ/ಕಂದಾಯ ವಿಭಾಗದ ಚುನಾವಣಾಧಿಕಾರಿಗಳಿಂದ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ.<br>ಬೆಂಗಳೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿಗಳು ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52. |

| | | |
|---|---|---|
| | | ಮೈಸೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು.<br>ಬೆಳಗಾಂ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾಂ<br>ಗುಲ್ಬರ್ಗ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಗುಲ್ಬರ್ಗ, |
| 5. | ಅಭ್ಯರ್ಥಿಗಳಿಂದ ನಾಮಪತ್ರವನ್ನು ಹಿಂಪಡೆಯಲು ಕಡೆಯ ದಿನಾಂಕ (Karnataka Medical Registration Rules 1963, ಮತ್ತು ತಿದ್ದುಪಡಿ ನಿಯಮ 12 ರಂತೆ) | ದಿನಾಂಕ:17-01-2020 ಶುಕ್ರವಾರ ಮಧ್ಯಾಹ್ನ 3.00 ಘಂಟೆಯೊಳಗೆ ರಿಟರ್ನಿಂಗ್ ಅಧಿಕಾರಿ/ಕಂದಾಯ ವಿಭಾಗದ ಚುನಾವಣಾಧಿಕಾರಿಗಳಿಗೆ ನಾಮ ಪತ್ರ ಹಿಂಪಡೆಯಲು ಅರ್ಜಿ ಸಲ್ಲಿಸಬಹುದು.<br>ಬೆಂಗಳೂರು ರೆವೆನ್ಯೂ ವಿಭಾಗ-ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52.<br>ಮೈಸೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು.<br>ಬೆಳಗಾಂ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾಂ<br>ಗುಲ್ಬರ್ಗ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಗುಲ್ಬರ್ಗ,<br>[ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಚುನಾವಣಾಧಿಕಾರಿ ಇಲ್ಲವೇ ಅಧಿಕಾರ ಪತ್ರ ಪಡೆದ ಅಧಿಕಾರಿ] |
| 6. | ರಿಟರ್ನಿಂಗ್/04 ಕಂದಾಯ ವಿಭಾಗಗಳ ಆಯಾ ವಿಭಾಗದ ಚುನಾವಣಾ ಅಧಿಕಾರಿಯಿಂದ ಚುನಾವಣೆ ಸ್ಪರ್ದೆಗೆ ಸಿಂಧುತ್ವ ಹೊಂದಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ. | ದಿನಾಂಕ:17-01-2020 ಶುಕ್ರವಾರ ಮಧ್ಯಾಹ್ನ 3.00 ಘಂಟೆಯ ನಂತರ ರಿಟರ್ನಿಂಗ್ ಅಧಿಕಾರಿ/ಕಂದಾಯ ವಿಭಾಗದ ಚುನಾವಣಾಧಿಕಾರಿಗಳ ಕಛೇರಿಗಳಲ್ಲಿ.<br>ಬೆಂಗಳೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿಗಳು ಕರ್ನಾಟಕ ವೈದ್ಯಕೀಯ ಪರಿಷತ್ ನಂ.16/6, 2ನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ ಬೆಂಗಳೂರು-52.<br>ಮೈಸೂರು ರೆವೆನ್ಯೂ ವಿಭಾಗ-ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು.<br>ಬೆಳಗಾಂ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾಂ<br>ಗುಲ್ಬರ್ಗ ರೆವೆನ್ಯೂ ವಿಭಾಗ- ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಗುಲ್ಬರ್ಗ, |
| 7. | ಮತದಾನದ ಸ್ಥಳ: ದಿನಾಂಕ ಮತ್ತು ಸಮಯ (Karnataka Medical Registration Rules 1963 ತಿದ್ದುಪಡಿ ನಿಯಮ 2019 ನಿಯಮ 7(d) ರಂತೆ) | ದಿನಾಂಕ:23:01:2020, ಬೆಳಗ್ಗೆ 10.00 ರಿಂದ ಸಂಜೆ 5.00 ಗಂಟೆಯವರೆಗೆ.<br>ವಿಶೇಷ ಸೂಚನೆ:- ಚುನಾವಣೆ ನಡೆಯುವ ಸ್ಥಳಗಳನ್ನು ಕಂದಾಯ ವಿಭಾಗವಾರು ಪ್ರತ್ಯೇಕವಾಗಿ ಪತ್ರಿಕಾ/ವೆಬ್‌ಸೈಟ್ ಪ್ರಕಟಣೆ ಮೂಲಕ/ನೋಟೀಸ್ ಬೋರ್ಡ್‌ನಲ್ಲಿ ಚುನಾವಣಾ ದಿನಾಂಕದ ಪೂರ್ವದ 15 ದಿನಗಳ ಮೊದಲು ಪ್ರಕಟಿಸಲಾಗುವುದು. |

| | | |
|---|---|---|
| ೮. | ಮತ ಎಣಿಕೆಯ ದಿನಾಂಕ ಮತ್ತು ಸಮಯ ಹಾಗೂ ಸ್ಥಳ | ದಿನಾಂಕ:25-01-2020 ಶನಿವಾರ ಬೆಳಿಗ್ಗೆ 10.00 ರಿಂದ ಮತ ಎಣಿಕೆ ಮುಗಿಯುವವರೆಗೆ, ಮತ ಎಣಿಕೆ ಸ್ಥಳವನ್ನು ಪತ್ರಿಕಾ/ವೆಬ್‌ಸೈಟ್ ಪ್ರಕಟಣೆ ಮೂಲಕ/ನೋಟೀಸ್ ಬೋರ್ಡ್‌ನಲ್ಲಿ ಚುನಾವಣಾ ದಿನಾಂಕದ ಪೂರ್ವದ 15 ದಿನಗಳ ಮೊದಲು ಪ್ರಕಟಿಸಲಾಗುವುದು. |
| ೯. | ರಿಟರ್ನಿಂಗ್ ಅಧಿಕಾರಿ/ಚುನಾವಣಾ ಅಧಿಕಾರಿಯಿಂದ ಚುನಾವಣಾ ಫಲಿತಾಂಶ ಪ್ರಕಟಣೆ | ದಿನಾಂಕ:25-01-2020 ಶನಿವಾರ ಮತ ಎಣಿಕೆ ಮುಗಿದ ನಂತರ ಫಲಿತಾಂಶ ಘೋಷಣೆ. |

ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ಚುನಾಯಿಸಬೇಕಾದ ಒಟ್ಟು ಸ್ಥಾನಗಳು-12 [4 ಕಂದಾಯ ವಿಭಾಗಗಳಿಂದ ಪ್ರತಿ ಕಂದಾಯ ವಿಭಾಗದಲ್ಲಿ ಇಬ್ಬರು ಮೆಡಿಕಲ್ ಪ್ರಾಕ್ಟೀಷನರ್ ಕ್ಷೇತ್ರದಿಂದ, ಒಟ್ಟು 8 ಜನ ಮೆಡಿಕಲ್ ಪ್ರಾಕ್ಟೀಷನರ್ಸ್ ಹಾಗೂ 4 ಕಂದಾಯ ವಿಭಾಗಗಳಿಂದ ಪ್ರತಿ ಕಂದಾಯ ವಿಭಾಗದಲ್ಲಿ ಒಬ್ಬ ಟೀಚರ್ಸ್ ಕ್ಷೇತ್ರದಿಂದ, ಒಟ್ಟು 4 ಟೀಚರ್ಸ್ ಹೀಗೆ ಒಟ್ಟು 12 ಜನರನ್ನ ಆಯ್ಕೆ ಮಾಡಬೇಕಾಗಿರುತ್ತದೆ.] (Karnataka Medical Registration Act 1961 ರ ತಿದ್ದುಪಡಿ ಕಾಯ್ದೆ 2017 ಕಲಂ 3(2)(ಎ) ಮತ್ತು (ಬಿ) ರಂತೆ)

ಸೂಚನೆಗಳು:

1. ಕೆ.ಎಂ.ಸಿ ಸದಸ್ಯರ ಮತದಾನದ ಅನುಕೂಲಕ್ಕಾಗಿ ರಾಜ್ಯದ 4 ಕಂದಾಯ ವಿಭಾಗದ ಜಿಲ್ಲಾ ಕೇಂದ್ರಗಳಲ್ಲಿ ಮತದಾನಕ್ಕಾಗಿ ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು. ಮತದಾನದ ಪೂರ್ವದ 15 ದಿನಗಳ ಮೊದಲು ಜಿಲ್ಲಾ ಮತದಾನ ಕೇಂದ್ರದ ವಿಳಾಸವನ್ನು ದಿನಪತ್ರಿಕೆಗಳಲ್ಲಿ, ಕೆ.ಎಂ.ಸಿ ವೆಬ್‌ಸೈಟ್‌ನಲ್ಲಿ ಮತ್ತು ನೋಟೀಸ್ ಬೋರ್ಡ್‌ನಲ್ಲಿ ಸಾರ್ವಜನಿಕವಾಗಿ ಪ್ರಕಟಿಸಲಾಗುವುದು.

2. ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ಆಯಾ ಕಂದಾಯ ವಿಭಾಗದ ಕಾರ್ಯವ್ಯಾಪ್ತಿಯಲ್ಲಿ ಪರಿಷತ್ತಿನ ಸದಸ್ಯರು ಹೊಂದಿರುವ ವಿಳಾಸವನ್ನು ಆಧರಿಸಿ ಮತದಾನ ನಡೆಯಲಿದ್ದು, ಆಯಾ ಕಂದಾಯ ವಿಭಾಗದ ಮೆಡಿಕಲ್ ಪ್ರಾಕ್ಟೀಷನರ್ಸ್ ವಿಭಾಗದಿಂದ ಇಬ್ಬರನ್ನು ಮಾತ್ರ ಆಯ್ಕೆ ಮಾಡತಕ್ಕದ್ದು ಹಾಗೂ ಟೀಚರ್ಸ್ ವಿಭಾಗದಿಂದ ಒಬ್ಬರನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಇದಕ್ಕಿಂತ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳಿಗೆ ಮತದಾನ ಮಾಡಿದಲ್ಲಿ ಅಂತಹ ಮತ ಪತ್ರ ತಿರಸ್ಕೃತಗೊಳ್ಳುವುದೆಂದು ತಿಳಿಯತಕ್ಕದ್ದು. [ತಿದ್ದುಪಡಿ ಅಧಿನಿಯಮ 3(2)(ಎ) & (ಬಿ)]

3. ಆಯಾ ಕಂದಾಯ ವಿಭಾಗದ ಅಂತಿಮ ಮತದಾರರ ಪಟ್ಟಿಯಲ್ಲಿರುವ ಮತದಾರನು ಆ ವಿಭಾಗದಿಂದ ಆಯ್ಕೆ ಮಾಡಬೇಕಾದ ಮೆಡಿಕಲ್ ಪ್ರಾಕ್ಟೀಷನರ್ಸ್ ಕ್ಷೇತ್ರದಿಂದ ಇಬ್ಬರು ಹಾಗೂ ಟೀಚರ್ಸ್ ವಿಭಾಗದಿಂದ ಒಬ್ಬರು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾದ ಕಾರಣ, ಅಷ್ಟು ಮಾತ್ರ ಸ್ಪರ್ದಿಸುವ ಅಭ್ಯರ್ಥಿಗಳಿಗೆ ಒಬ್ಬರು ಸೂಚಕರಾಗಿಯು ಮತ್ತು ಇನ್ನೊಬ್ಬರು ಅನುಮೋಧಕರಾಗಿಯು ಅಭ್ಯರ್ಥಿಯ ನಾಮಪತ್ರದಲ್ಲಿ ಸಹಿ ಮಾಡಲು ಅರ್ಹರಿರುತ್ತಾರೆ. ಒಂದು ಪಕ್ಷ ಮೆಡಿಕಲ್ ಪ್ರಾಕ್ಟೀಷನರ್ಸ್ ವಿಭಾಗದಿಂದ ಇಬ್ಬರ ನಾಮಪತ್ರಗಳಿಗಿಂತ ಹೆಚ್ಚು ನಾಮಪತ್ರಗಳಿಗೆ ಸೂಚಕ/ಅನುಮೋಧಕರಾದಲ್ಲಿ ಮತ್ತು ಟೀಚರ್ಸ್ ವಿಭಾಗದಿಂದ ಹೆಚ್ಚು ನಾಮ ಪತ್ರಗಳಿಗೆ ಸೂಚಕ/ಅನುಮೋಧಕರಾದಲ್ಲಿ ಅಂತಹ ನಾಮಪತ್ರಗಳು ತಿರಸ್ಕೃತಗೊಳ್ಳುತ್ತವೆ. [Karnataka Medical Registration Rules 1963 ನಿಯಮ 9(3)]

4. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ನಮೂನೆ–II ರ ನಾಮಪತ್ರ ಅರ್ಜಿಯನ್ನು ರಿಟರ್ನಿಂಗ್ ಅಧಿಕಾರಿ/ಚುನಾವಣಾಧಿಕಾರಿಯಿಂದ ಉಚಿತವಾಗಿ ಕಛೇರಿ ವೇಳಾ ಅವಧಿಯಲ್ಲಿ ಪಡೆಯಬಹುದಾಗಿದೆ. [ನಿಯಮ 9(1)]. ಹಾಗೂ ನಿಯಮ 9(2)ರಂತೆ ಸೂಚಕ/ಅನುಮೋಧಕನು ಆಯಾ ಕಂದಾಯ ವಿಭಾಗದ ಮತದಾರರ ಪಟ್ಟಿಯಲ್ಲಿ ಹೆಸರು ಇರಬೇಕು.

5. ತಿದ್ದುಪಡಿ ನಿಯಮ 9(iv)ರಂತೆ ಆಯಾ ಕಂದಾಯ ವಿಭಾಗದಿಂದ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಆ ವಿಭಾಗದಲ್ಲೆ ರಿಟರ್ನಿಂಗ್ ಅಧಿಕಾರಿಯಿಂದ ನೇಮಕವಾದ ಚುನಾವಣಾಧಿಕಾರಿಗೆ ಸ್ವ–ಇಚ್ಚೆಯಿಂದ ನಾಮಪತ್ರವನ್ನು ಸಲ್ಲಿಸಬಹುದು. [ತಿದ್ದುಪಡಿ ನಿಯಮ 15(3)]

6. ನಾಮಪತ್ರ ಸಲ್ಲಿಸುವ ಅಭ್ಯರ್ಥಿಗಳು ರಿಟರ್ನಿಂಗ್ ಅಧಿಕಾರಿ/ಚುನಾವಣಾಧಿಕಾರಿಯವರಿಗೆ ಮೇಲಿನ ವೇಳಾಪಟ್ಟಿಯಲ್ಲಿರುವಂತೆ ನಿಗದಿತ ಸಮಯ 5.00 ಗಂಟೆಯೊಳಗೆ ಖುದ್ದಾಗಿ ಇಲ್ಲವೇ ನೋಂದಾಯಿತ ಅಂಚೆ ಮೂಲಕ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು. [ನಿಯಮ 9 ತಿದ್ದುಪಡಿ ನಿಯಮ (v) ರಂತೆ]

KARNATAKA MEDICAL COUNCIL
No.............
Dt.............
BANGALORE

7. ನಿಗದಿತ ದಿನಾಂಕ ಮತ್ತು ಸಮಯದ ನಂತರ ಬರುವ ನಾಮ ಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅವುಗಳನ್ನು ತಿರಸ್ಕರಿಸಲಾಗುತ್ತೆಂದು ತಿಳಿಯತಕ್ಕದ್ದು. [ನಿಯಮ (6) ರಂತೆ]

8. ನಿಗದಿತ ದಿನ ಮತ್ತು ಸಮಯದೊಳಗೆ ಸ್ವೀಕೃತವಾದ ನಾಮ ಪತ್ರಗಳ ಬಗ್ಗೆ ವೈದ್ಯಕೀಯ ಪರಿಷತ್ತಿನ ಅಧಿಕೃತ ವೆಬ್‌ಸೈಟ್‌ನಲ್ಲಿಯು ಹಾಗೂ ನೋಟೀಸ್ ಬೋರ್ಡ್‌ನಲ್ಲಿಯು ಪ್ರಕಟಿಸಲಾಗುವುದು. [ತಿದ್ದುಪಡಿ ನಿಯಮ (7)ರಂತೆ]

9. ರಿಟರ್ನಿಂಗ್ ಅಧಿಕಾರಿ/ಚುನಾವಣಾಧಿಕಾರಿಗೆ ಅಭ್ಯರ್ಥಿಗಳು ತಮ್ಮ ನಾಮಪತ್ರದೊಂದಿಗೆ Registrar of the Medical Council ಇವರ ಹೆಸರಿನಲ್ಲಿ ರೂ.500/– ಗಳ ಚುನಾವಣಾ ಠೇವಣಿ ಡಿ.ಡಿ ಯನ್ನು ತಪ್ಪದೇ ಲಗತ್ತಿಸಿರಬೇಕು. ತಪ್ಪಿದಲ್ಲಿ ಅಂತಹ ನಾಮಪತ್ರಗಳು ಸ್ವೀಕಾರರ್ಹವಾಗುವುದಿಲ್ಲವೆಂದು ತಿಳಿಯತಕ್ಕದ್ದು ಹಾಗೂ ಚುನಾವಣಾ ಠೇವಣಿ ಹಣವನ್ನು ಪರಿಷತ್ತಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ನಿಯಮ 10(1), ಚುನಾವಣಾ ಠೇವಣಿ ವಾಪಸ್ಸು ಮಾಡುವ ಬಗ್ಗೆ ಕ್ರಮವಹಿಸಲಾಗುವುದು. [ನಿಯಮ 10(1), (2) ಹಾಗೂ ತಿದ್ದುಪಡಿ ನಿಯಮ(10)]

10. ನಾಮಪತ್ರಗಳ ಪರಿಶೀಲನೆ ಸಂದರ್ಭದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಹಾಜರಿರಬಹುದು ಅಥವಾ ಅವರ ಪ್ರತಿನಿಧಿ ಹಾಜರಿರಲು ಅವಕಾಶವಿದೆ. ನಾಮಪತ್ರಗಳ ಪರಿಶೀಲನೆ ಮತ್ತು ಅರ್ಹತೆ ನಿರ್ಧಾರವು ರಿಟರ್ನಿಂಗ್ ಅಧಿಕಾರಿ/ಚುನಾವಣಾಧಿಕಾರಿಗಳ ನಿರ್ಧಾರವೇ ಅಂತಿಮವಾಗಿರುತ್ತದೆ ಹಾಗೂ ಅರ್ಹ ನಾಮಪತ್ರಗಳ ಪ್ರಕಟಣೆಯನ್ನು ಪರಿಶೀಲನೆಯ ನಂತರ ಪ್ರಕಟಿಸಲಾಗುವುದು. [ನಿಯಮ 11 ರಂತೆ]

11. ಪರಿಷತ್ತಿಗೆ 4 ಕಂದಾಯ ವಿಭಾಗವಾರು ಚುನಾವಣಾ ಮೂಲಕ ಆಯ್ಕೆ ಆಗಬೇಕಾದ ಸಂಖ್ಯೆಗೆ ಸಮನಾದ ನಾಮಪತ್ರಗಳಷ್ಟೆ ಸ್ವೀಕೃತವಾದಲ್ಲಿ ಅಂತಹ ಅಭ್ಯರ್ಥಿಗಳು ಆಯ್ಕೆಯಾಗಿರುತ್ತಾರೆಂದು ಘೋಷಿಸಲಾಗುವುದು. ಚುನಾಯಿಸಬೇಕಾದ ಸಂಖ್ಯೆಗಿಂತ ಕಡಿಮೆ ನಾಮಪತ್ರ ಬಂದಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯು ನಾಮಪತ್ರ ಹಿಂಪಡೆದ ನಂತರ ಉಳಿಯುವ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆಂದು ಘೋಷಣೆ ಮಾಡಲಾಗುವುದು. [ನಿಮಯ 13(1)ರಂತೆ ಹಾಗೂ ನಿಯಮ 13(2)ರಂತೆ]

12. ಆಯ್ಕೆಯಾಗಬೇಕಾದ ಸಂಖ್ಯೆಗಿಂತ ಹೆಚ್ಚಿನ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಉಳಿದಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯು ನಾಮಪತ್ರ ವಾಪಸ್ ಪಡೆಯುವ ಸಮಯ ಮುಗಿದ ನಂತರ ಅಂತವರ ಹೆಸರುಗಳನ್ನು ವಿಳಾಸ ಸಮೇತ ವೈದ್ಯಕೀಯ ಪರಿಷತ್ತಿನ ನೋಟೀಸ್ ಬೋರ್ಡ್ ಮತ್ತು ಅಧಿಕೃತ ವೆಬ್‌ಸೈಟಿನಲ್ಲಿ ಚುನಾವಣಾ ಕಣದಲ್ಲಿ ಉಳಿದ ಕಂದಾಯ ವಿಭಾಗವಾರು ಪ್ರಕಟಣೆಯನ್ನು ನೀಡಲಾಗುವುದು. [ತಿದ್ದುಪಡಿ ಅಧಿನಿಯಮ 13(3)ರಂತೆ]

13. ಮತದಾನದ ಹಕ್ಕುಳ್ಳ ಸದಸ್ಯರು ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಹೆಸರನ್ನು ಓದಿಕೊಂಡು ಅವರ ಕ್ರಮಸಂಖ್ಯೆ ಮತ್ತು ಹೆಸರನ್ನ ಗುರುತಿಸಿ ಮತದಾನ ಮಾಡುವುದು.

14. ಕೆ.ಎಂ.ಸಿ ರವರು ಭಾವಚಿತ್ರ ಇರುವ ಗುರುತಿನ ಕಾರ್ಡ್‌ನ್ನು ಮತದಾನದ ವೇಳೆ ಸದಸ್ಯರು ಕಡ್ಡಾಯವಾಗಿ ಹಾಜರುಪಡಿಬೇಕು. ಒಂದು ಪಕ್ಷ ಸದರಿ ಗುರುತಿನ ಕಾರ್ಡ್ ಇಲ್ಲದಿದ್ದಲ್ಲಿ ಭಾರತ ಚುನಾವಣಾ ಆಯೋಗ ನೀಡಿರುವ ಗುರುತಿನ ಚೀಟಿ ಇಲ್ಲವೇ ಆಧಾರ್ ಕಾರ್ಡ್‌ನ್ನು ಮತದಾನದ ಸಮಯದಲ್ಲಿ ಚುನಾವಣಾ ಸಿಬ್ಬಂದಿಗೆ ತೋರಿಸುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಮತದಾನದ ಅವಕಾಶವನ್ನು ಸದಸ್ಯರು ಕಳೆದುಕೊಳ್ಳುತ್ತಾರೆ.

15. **ಮತದಾನ ಎಣಿಕೆ ಕಾರ್ಯವನ್ನು ಆಯಾ ಕಂದಾಯ ವಿಭಾಗದ ಕೇಂದ್ರ ಸ್ಥಾನದಲ್ಲಿ ನಡೆಸಲಾಗುವುದು ಮತ್ತು ಅಂದೆ ಫಲಿತಾಂಶವನ್ನು ಘೋಷಣೆ ಮಾಡಲಾಗುವುದು. ಒಟ್ಟಾರೆ ಫಲಿತಾಂಶವನ್ನು ಬೆಂಗಳೂರು ಮತದಾನ ಕೇಂದ್ರದಲ್ಲಿ ರಿಟರ್ನಿಂಗ್ ಅಧಿಕಾರಿಯವರು ಘೋಷಿಸುವರು.**

16. ಸದಸ್ಯರು ತಮ್ಮ ನಾಮಪತ್ರಗಳಲ್ಲಿ ತಾವು ಯಾವ ಕ್ಷೇತ್ರದಿಂದ (ಮೆಡಿಕಲ್ ಪ್ರಾಕ್ಟೀಷನರ್ಸ್ ಅಥವಾ ಟೀಚರ್ಸ್) ಸ್ಪರ್ಧಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

17. ಕೆ.ಎಂ.ಸಿ ಚುನಾವಣೆಯು Karnataka Medical Registration Act 1961 ತಿದ್ದುಪಡಿ ನಿಯಮ 2003 ಮತ್ತು 2017 ಹಾಗೂ Karnataka Medical Registration Rules 1963 ತಿದ್ದುಪಡಿ ನಿಯಮ 2019 ರಲ್ಲಿ ಇರುವ ಚುನಾವಣಾ ಕಾರ್ಯವಿಧಾನಗಳ ಅವಕಾಶಗಳಡಿಯಲ್ಲಿ ಚುನಾವಣೆಯನ್ನು ಜರುಗಿಸಲಾಗುತ್ತಿದ್ದು, ಸದರಿ ಅಧಿನಿಯಮ ಮತ್ತು ತಿದ್ದುಪಡಿ ಅಧಿನಿಯಮ ಹಾಗೂ ನಿಯಮ ಮತ್ತು ತಿದ್ದುಪಡಿ ನಿಯಮಗಳ ಅವಕಾಶಗಳನ್ನು ಸದಸ್ಯರು ಹೆಚ್ಚಿನ ಮಾಹಿತಿಗಾಗಿ ಅವಲೋಕಿಸಬಹುದಾಗಿದೆ.

18. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ ಮತಕ್ಷೇತ್ರದಿಂದ ಮಾತ್ರ (ಮೆಡಿಕಲ್ ಪ್ರಾಕ್ಟೀಷನರ್ಸ್ ಕ್ಷೇತ್ರ ಹಾಗೂ ಟೀಚರ್ಸ್ ಕ್ಷೇತ್ರ) ಸ್ಪರ್ಧಿಸಲು ಅವಕಾಶವಿರುತ್ತದೆ.

19. ಕೆ.ಎಂ.ಸಿ ಆಡಳಿತ ಮಂಡಲಿ ಸದಸ್ಯರಾಗಿ ಚುನಾಯಿತರಾಗಲು Karnataka Medical Registration Act 1961 ಮತ್ತು ತಿದ್ದುಪಡಿ ಕಾಯ್ದೆ 2017 ಹಾಗೂ Karnataka Medical Registration Rules 1963, ತಿದ್ದುಪಡಿ ನಿಯಮ 2019 ರಡಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.

20. Karnataka Medical Registration Rules 1963 ತಿದ್ದುಪಡಿ ನಿಯಮ 2019 ನಿಯಮ 19(1–A)(ii) ರ ಪ್ರಕಾರ ಚುನಾವಣಾ ವೇಳಾಪಟ್ಟಿ ಪ್ರಕಟಣೆಯ ಬಗ್ಗೆ ರಿಟರ್ನಿಂಗ್ ಅಧಿಕಾರಿ/ಕಂದಾಯ ವಿಭಾಗದ ಚುನಾವಣಾಧಿಕಾರಿಗಳು ಪ್ರಕಟಿಸುವ ಅವರವರ ಕಛೇರಿಯ ನೋಟೀಸ್ ಬೋರ್ಡ್ ಇಲ್ಲವೇ ಪರಿಷತ್ತಿನ ನೋಟೀಸ್ ಬೋರ್ಡ್‌ನಲ್ಲಿ ಹಾಗೂ ವೈದ್ಯಕೀಯ ಪರಿಷತ್ತಿನ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರತಿ ಕಂದಾಯ ವಿಭಾಗವಾರು ಚುನಾವಣಾ ಪ್ರಕ್ರಿಯೆ ಬಗ್ಗೆ ಪ್ರಕಟಣೆಯನ್ನು ನೀಡಲಾಗಿದೆ.

21. ಚುನಾವಣೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕಛೇರಿಯ ನೋಟೀಸ್ ಬೋರ್ಡ್ ಮತ್ತು ವೈದ್ಯಕೀಯ ಪರಿಷತ್ತಿನ ವೆಬ್‌ಸೈಟಿನಲ್ಲಿ ಪರಿಷತ್ತಿನ ಸದಸ್ಯರು ಪರಿಶೀಲಿಸಲು ಅವಕಾಶ ಮಾಡಿಕೊಡಲಾಗಿದೆ.

22. ಕರ್ನಾಟಕ ವೈದ್ಯಕೀಯ ಪರಿಷತ್ ತಿದ್ದುಪಡಿ ನಿಯಮ 8 ರಂತೆ ಅಂತಿಮ ಮತದಾರರ ಪಟ್ಟಿಯನ್ನು ಕಂದಾಯ ವಿಭಾಗವಾರು ನಿಯಮ 4, 5 ಮತ್ತು 6 ರಂತೆ ಪ್ರಕಟಿಸಲು ಕರ್ನಾಟಕ ವೈದ್ಯಕೀಯ ಪರಿಷತ್ ಕ್ರಮ ಕೈಗೊಂಡಿರುವುದನ್ನು ತಿಳಿಸಲಾಗಿದೆ.

23. ಕರ್ನಾಟಕ ವೈದ್ಯಕೀಯ ಪರಿಷತ್ ತಿದ್ದುಪಡಿ ನಿಯಮ 9 ರ ಅನುಸಾರ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ಚುನಾವಣೆಯನ್ನು ಜರುಗಿಸಲಾಗುತ್ತಿದ್ದು, ಆಯಾ ವಿಭಾಗದ ವ್ಯಾಪ್ತಿಯಲ್ಲಿ ಬರುವ ಪರಿಷತ್ತಿನ ಸದಸ್ಯರು ಆ ವಿಭಾಗದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಮತ ನೀಡಲು ಅರ್ಹತೆಯನ್ನು ಹೊಂದಿರುತ್ತಾರೆ.

ದಿನಾಂಕ:22-11-2019
ಸ್ಥಳ: ಬೆಂಗಳೂರು

(ಡಿ.ಪಾಂಡುರಂಗ ಗರಗ್)
ರಿಟರ್ನಿಂಗ್ ಅಧಿಕಾರಿ,
ಕರ್ನಾಟಕ ವೈದ್ಯಕೀಯ ಪರಿಷತ್ ಬೆಂಗಳೂರು
ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು,
(ಕಾನೂನು ಕೋಶ), ಕೇಂದ್ರ ಕಛೇರಿ, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

ಸಂಪರ್ಕಕ್ಕಾಗಿ:
**080-22268436, 9663966644**
E-mail-jrcs-legal-ka@nic.in.
**KMC-080-22200888, Fax-080-22200300**
E-mail-kar.medi_council@yahoo.co.in